ಶ್ರೀ ಎಂ. ವೀರಪ್ಪ ಮೊಯಿಲಿ.—

"ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೩೩೨(೨)ನೇ ನಿಯಮದ ಅನುಸಾರವಾಗಿ ಈ ಸಭೆ, ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಲು ಮುಂದುವರಿಯುವುದು."

MR. SPEAKER.—The question is,

"That this Assembly do proceed to elect eight members to the House Committee in accordance with sub-rule(2) of Rule 332 of the Rules of Procedure and Conduct of Business in the Karnataka Legislative Assembly.

The motion was adopted.

MR. SPEAKER.—The Calendar of events will be intimated separately.

ಮ ನ ವಿ ಗ ಳಂ

ಶ್ರೀ ಪಿ. ರಾಮ್‌ದೇವ್.—ಅಧ್ಯಕ್ಷರೇ, ರಾಜ್ಯ ಸರ್ಕಾರ ರಾಜ್ಯದ ಹಿತಾಸಕ್ತಿಯನ್ನು ಬಲಿ ಕೊಟ್ಟಿರತಕ್ಕ ಒಂದು ಘಟನೆಯನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಿಪ್ಪಾಣಿ ಪುಟ್ಟು ಸುತ್ತಮುತ್ತಲ ಹಳ್ಳಿಗಳು ಮಹಾಜನ್ ಕಮಿಷನ್ ವರದಿಯ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗಬೇಕಾಗಿದೆ. ಗೋಗಟಿಯಲ್ಲಿ ಇತ್ತೀಚೆಗೆ ಒಂದು ಸಕ್ಕರೆ ಕಾರ್ಖಾನೆಗೆ ಪರವಾನಿಗೆ ಕೊಟ್ಟಿದ್ದಾರೆ. ಹಿಂದೆ ಈ ಸಭೆಯಲ್ಲಿ ಈ ಭಾಗದಲ್ಲಿ ಸ್ಪಿನ್ನಿಂಗ್ ಮಿಲ್ ಕೊಟ್ಟಿದ್ದರ ಬಗ್ಗೆ ಚರ್ಚೆ ಕೂಡಾ ಆಗಿದೆ. ಪುನಃ ಅಲ್ಲಿಗೆ ಯಾವ ಬೇಸಿಸ್ ಮೇಲೇ ಮಹಾರಾಷ್ಟ್ರಕ್ಕೆ ಹೋಗತಕ್ಕ ಈ ಜಾಗದಲ್ಲಿ ಇದನ್ನು ನಿರ್ಮಿಸಲಂ ಪರವಾನಿಗೆ ಕೊಡುತ್ತಿದ್ದಾರೆ? ಇದರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ತೊಡಗಿಸಬೇಕಾಗಿದೆ. ಇಲ್ಲಿ ಹಣವನ್ನು ತೊಡಗಿಸಿದ ಮೇಲೆ ಆ ಜಾಗ ಮಹಾರಾಷ್ಟ್ರಕ್ಕೆ ಹೋದ ಪಕ್ಷದಲ್ಲಿ ಈ ಫಾಕ್ಟರಿಯೂ ಹೋಗುವುದಿಲ್ಲವೇ ?

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಾ ?

ಶ್ರೀ ಪಿ. ರಾಮ್‌ದೇವ್.—ಇದು ತುರ್ತು ವಿಚಾರ ಆಗಿದೆ ;

ಅಧ್ಯಕ್ಷರು.—ತಾವು ನಿಯಮ ೬೩ರ ಕೆಳಗೆ ನೋಟೀಸ್ ಕೊಡಿ.

ಶ್ರೀ ಎಂ. ಸಿ. ನಾನಯ್ಯ.—ಈ ಬಗ್ಗೆ ಬೇರೆ ನೋಟೀಸ್ ಕೊಟ್ಟು ಚರ್ಚೆ ಮಾಡೋಣ.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೇ, ಚಿಕ್ಕಮಗಳೂರಿನ ಹಾಸ್ಪೆಲ್‌ನಲ್ಲಿ ಒಬ್ಬ ವಿದ್ಯಾರ್ಥಿ ಸತ್ತು ಅನೇಕ ವಿದ್ಯಾರ್ಥಿಗಳು ಆಸ್ಪತ್ರೆಗೆ ಸೇರಿರುವ ವಿಷಯ ಪತ್ರಿಕೆಯಲ್ಲಿ ಬಂದಿದೆ. ಈ ಬಗ್ಗೆ ನಾನು ನೋಟೀಸನ್ನು ಕೊಟ್ಟಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಮಾಹಿತಿ ಇದ್ದರೆ ಕೊಡಲಿ, ಇಲ್ಲದಿದ್ದ ಪಕ್ಷದಲ್ಲಿ ನಾಳೆ ಈ ವಿಷಯವನ್ನು ತಿಳಿಸಬಹುದು.

ಶ್ರೀ ಪಿ. ವೆಂಕಟರಮಣಿ.—ನಾಳೆ ಸಭೆಯ ಮುಂದೆ ಈ ವಿಷಯವನ್ನು ತಿಳಿಸುತ್ತೇನೆ.

Financial Business

Discussion on voting of Demands for 1982-83.

ಶ್ರೀ ಎಂ. ಸಿ. ನಾನಯ್ಯ (ಮಂಡಕೇರಿ).—ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ಬೇಡಿಕೆ ಮೇಲೆ ಸುಮಾರು ೧೩ ಕೋಟಿ ೪೨ ಲಕ್ಷ ರೆವಿನ್ಯೂ ಖಾತೆಗೆ ಸಂಬಂಧಪಟ್ಟಹಾಗೆ, ೨೨ ಕೋಟಿ ೪೭ ಲಕ್ಷ ರೂಪಾಯಿ ಕ್ಯಾಪಿಟಲ್ ಅಕೌಂಟ್‌ಗೆ ಸಂಬಂಧಪಟ್ಟಹಾಗೆ ಬೇಡಿಕೆಯನ್ನು ಈ ಸದನದ ಮುಂದೆ ಇಡಲಾಗಿದೆ. ನಾನು ಈ ಇಲಾಖೆಯ ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ಒಂದು ವಿಷಯವನ್ನು ಈ